# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ/ಸ.ಕಂ.ಅ/ಗಿನ/ಪಿ.ಆರ್/164/18-19

ಸಹ ಕಂದಾಯ ಅಧಿಕಾರಿ ಕಛೇರಿ
ಗಿರನಗರ ಉಪವಿಭಾಗ
ಚನ್ನಮ್ಮನಕೆರೆ ಅಚ್ಚುಕಟ್ಟು 1ನೇ ಮಹಡಿ
ಎಸ್.ಎಸ್.ಎಂ ಶಾಲೆ ಎದುರು
ಬೆಂಗಳೂರು. ದಿನಾಂಕ: 05.01-2019.

## ಸಭೆಯ ಸೂಚನಾ ಪತ್ರ

ವಾರ್ಡ್ ಸಂಖ್ಯೆ-164 ರ ವ್ಯಾಪ್ತಿಯಲ್ಲಿ ಬರುವ 2018-19ನೇ ಸಾಲಿನ ಕಾಮಗಾರಿ ಮತ್ತು ಇತರೆ ಕಾಮಗಾರಿಗಳ ಹಾಗೂ ಆರೋಗ್ಯ, ಕಂದಾಯ ವಿಭಾಗದ ಹಾಗೂ ಘನತ್ಯಾಜ್ಯ ವಿಭಾಗಕ್ಕೆ ಸಂಬಂಧಿಸಿದ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ. ವಾರ್ಡ್ ಸಮಿತಿಯ ಅಧ್ಯಕ್ಷರು ಸೂಚಿಸಿರುವ ಹಿನ್ನಲೆಯಲ್ಲಿ ಸಭೆಯನ್ನು ಏರ್ಪಡಿಲಾಗಿರುತ್ತದೆ. ಸದರಿ ಸಭೆಗೆ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

ದಿನಾಂಕ: 09-01-2019
ಬೆಳಿಗ್ಗೆ 10.30 ಗಂಟೆಗೆ
ಸ್ಥಳ: ವಾರ್ಡ್ ಕಛೇರಿ, ವಿದ್ಯಾಪೀಠ ವೃತ್ತ

5/1/2019
ಕಾರ್ಯದರ್ಶಿ ಮತ್ತು ಸಂಚಾಲಕರು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-164.

ರವರಿಗೆ.

1) ಶ್ರೀಮತಿ.ಶ್ಯಾಮಲ ಕುಮಾರ್, ಮನೆ ನಂ. 123, ಕತ್ರಿಗುಪ್ಪೆ ಗ್ರಾಮ,ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು-85.
2) ಶ್ರೀ.ಮುನಿಯಪ್ಪ, ಮನೆ ನಂ, 130, 3ನೇ ಅಡ್ಡರಸ್ತೆ, ಕತ್ರಿಗುಪ್ಪೆ, ಸಿದ್ದಾರ್ಥ ಬಡಾವಣೆ, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು 85
3) ಶ್ರೀ.ನಾರಾಯಣಪ್ಪ, ಮನೆ ನಂ 42, ದುರ್ಗಾಂಬ ದೇವಸ್ಥಾನ ರಸ್ತೆ, ಕತ್ರಿಗುಪ್ಪೆ, ಸಿದ್ದಾರ್ಥ ಬಡಾವಣೆ, ಬೆಂಗಳೂರು 85
4) ಶ್ರೀಮತಿ.ಭಾಗ್ಯಮ್ಮ,ಮನೆ ನಂ. 15, 1ನೇ ಅಡ್ಡರಸ್ತೆ,1ನೇ ಮುಖ್ಯರಸ್ತೆ, 80 ಅಡಿರಸ್ತೆ,ವಿನಾಯಕನಗರ, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು 85
5) ಶ್ರೀಮತಿ ಅನುಸೂಯಾ, ಮನೆ ನಂ. 4ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಚೆನ್ನಮ್ಮನಕೆರೆ ಅಚ್ಚುಕಟ್ಟು, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು 85
6) ಶ್ರೀಮತಿ. ಪುಷ್ಪ ಮನೆ ನಂ, ಚೆನ್ನಮ್ಮನಕೆರೆ ಅಚ್ಚುಕಟ್ಟು, ಸರಸ್ವತಿ ಶಾಲೆ, ಬೆಂಗಳೂರು
7) ನಾಡ ಪ್ರಭು ಕೆಂಪೇಗೌಡ ಉದ್ಯಾನವನ ಹಾಗೂ ಕ್ಷೇಮಾಭಿವೃದ್ಧಿ ಸಂಘ, (ರಿ) ಶ್ರೀ.ಎಂ.ಮುನಿರಾಜು, ಕಾರ್ಯದರ್ಶಿ, ಮನೆ ನಂ,347, 10ನೇ ಮುಖರಸ್ತೆ, ಬಿ.ಎಸ್.ಕೆ. 1ನೇ ಹಂತ,2ನೇ ಘಟಕ, ಬೆಂಗಳೂರು-
8) ಶಾರದಾಂಭನಗರ ಸ್ತ್ರೀ ಶಕ್ತಿ ಶಂಘ, ನಂ-44/ಎ, 1ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ವಿನಾಯಕನಗರ, ಬಿ.ಎಸ್.ಕೆ, 1ನೇ ಸ್ಟೇಜ್, ಬೆಂಗಳೂರು-85
9) ಯೋಗಾನಂದ ಸಿ.ಎಸ್, ನಂ 172/10, 3ನೇ ಅಡ್ಡರಸ್ತೆ, ಕತ್ರಗುಪ್ಪೆ ಮುಖ್ಯರಸ್ತೆ, ಬಿ.ಎಸ್.ಕೆ. 3ನೇ ಸ್ಟೇಜ್, ಬೆಂಗಳೂರು-85
10) ಕೆ.ಟಿ.ವೆಂಕಟೇಶ್, ನಂ.311, 1ನೇ ಮುಖ್ಯರಸ್ತೆ, ಚೆನ್ನಮ್ಮನಕೆರೆ ಅಚ್ಚುಕಟ್ಟು, ಬಿ.ಎಸ್.ಕೆ. 3ನೇ ಸ್ಟೇಜ್, ಬೆಂಗಳೂರು-85
11) ಗುಂಡಪ್ಪ.ಎಸ್.ನಂ.13, 2ನೇ ಮುಖ್ಯರಸ್ತೆ, ಕತ್ರಿಗುಪ್ಪೆ ಮುಖ್ಯರಸ್ತೆ, ಶ್ರೀನಿವಾಸನಗರ, ಬಿ.ಎಸ್.ಕೆ, 3ನೇ ಸ್ಟೇಜ್, ಬೆಂಗಳೂರು-85

AE5/MMPR/164/18-19

ವಾರ್ಡ್ ಕಮಿಟಿಯ ಸಭೆ (ವಾರ್ಡ್ ಸಂಖ್ಯೆ-164, ವಿದ್ಯಾಪೀಠ)

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಮಿತಿಯ ಸಭೆ, ಸಮಿತಿಯ ದಿನಾಂಕ: 09/01/2019

## ವಿಷಯದ ಸಂಖೆ:

ವಿಷಯ: 1) ಪಾಲಿಕೆಯ ಪಿ.ಓ.ಡಬ್ಲ್ಯೂ. ಕಾಮಗಾರಿಯ ಪಟ್ಟಿಯನು ಅನುಮೋದನೆ ನೀಡುವ ಬಗ್ಗೆ.

2) ಘನತ್ಯಾಜ್ಯ ನಿರ್ವಹಣೆಯ

3) ವಾರ್ಡ್ ವ್ಯಾಪ್ತಿಯಲ್ಲಿ ಒಂಟಿ ಮನೆಯ ಫಲಾನುಭವಿಗಳ ಅಯ್ಕೆಯ ಬಗ್ಗೆ.

| ಕ್ರಮ ಸಂಖ್ಯೆ | ಸದಸ್ಯರ ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಸದಸ್ಯರು |
|---|---|---|---|
| 01 | ಶ್ರೀಮತಿ.ಶ್ಯಾಮಲ ಕುಮಾರ್, | ಅಧ್ಯಕ್ಷರು | M. Shamala |
| 02 | ಶ್ರೀ.ಮುನಿಯಪ್ಪ | ಸದಸ್ಯರು | [signature] |
| 03 | ಶ್ರೀ.ನಾರಾಯಣಪ್ಪ | ಸದಸ್ಯರು | [signature] |
| 04 | ಶ್ರೀಮತಿ.ಭಾಗ್ಯಮ್ಮ | ಸದಸ್ಯರು | B.Bhagya |
| 05 | ಶ್ರೀಮತಿ ಅನುಸೂಯಾ | ಸದಸ್ಯರು | |
| 06 | ಶ್ರೀಮತಿ. ಪುಷ್ಪ | ಸದಸ್ಯರು | PUSHPA |
| 07 | ಶ್ರೀ ಎಂ.ಮುನಿರಾಜು<br>ನಾಡ ಪ್ರಭು ಕೆಂಪೇಗೌಡ ಉದ್ಯಾನವನ ಸಾಂಸ್ಕೃತಿಕ ಹಾಗೂಕ್ಷೇಮಾಭಿವೃದ್ಧಿ ಸಂಘ, (ರಿ) | ಸದಸ್ಯರು | |
| 08 | ಶಾರದಾಂಭನಗರ<br>ಮಹಿಳಾ ಸ್ತ್ರೀ ಶಕ್ತಿ ಶಂಘ, | ಸದಸ್ಯರು | B.Bhagya |
| 09 | ಯೋಗಾನಂದ ಸಿ.ಎಸ್. | ಸದಸ್ಯರು | [signature] |
| 10 | ಕೆ.ಟಿ.ವೆಂಕಟೇಶ್, | ಸದಸ್ಯರು | |
| 11 | ಗುಂಡಣ್ಣ.ಎಸ್. | ಸದಸ್ಯರು | [signature] |
| 12 | ಕಿರಿಯ/ಸಹಾಯಕ ಅಭಿಯಂತರರು ವಾರ್ಡ್ 164 | ಕಾರ್ಯದರ್ಶಿ ಮತ್ತು ನೂಡಲ್ ಅಧಿಕಾರಿ | [signature] |

[stamp] ಸಂಖ್ಯೆ 9349/A
ದಿನಾಂಕ 16-01-19

ಮಾಹಿತಿ ತಂತ್ರಜ್ಞಾನ [signature]

[stamp: Office of the IT Advisor, Bruhat Bengaluru Mahanagara Palike] No. 593 Date 21-1-19

IT Advisor
BBMP., Bangalore

## ದಿನಾಂಕ: 09-01-2019 ರಂದು ವಾರ್ಡ್ ಸಂಖ್ಯೆ: 164, ವಿದ್ಯಾಪೀಠದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿ

ವಿಷಯ ಸಂಖ್ಯೆ

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಶ್ರೀಮತಿ ಶ್ಯಾಮಲಾ ಕುಮಾರ್, ಪಾಲಿಕೆ ಸದಸ್ಯರು – ಅಧ್ಯಕ್ಷರು
2. ಶ್ರೀ ಸಹಾಯಕ ಅಭಿಯಂತರರು, ವಾರ್ಡ್-164, ವಿದ್ಯಾಪೀಠ- ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿ
3. ಶ್ರೀ ಮುನಿಯಪ್ಪ- ಸದಸ್ಯರು
4. ಶ್ರೀ ನಾರಾಯಣಪ್ಪ- ಸದಸ್ಯರು
5. ಶ್ರೀಮತಿ ಭಾಗ್ಯಮ್ಮ – ಸದಸ್ಯರು
6. ಶ್ರೀಮತಿ ಅನುಸೂಯ- ಸದಸ್ಯರು
7. ಶ್ರೀಮತಿ ಪುಷ್ಪ-ಸದಸ್ಯರು
8. ಶ್ರೀ ಎಂ. ಮುನಿರಾಜು-ನಾಡಪ್ರಭು ಕೆಂಪೇಗೌಡ ಉದ್ಯಾನವನ ಸಾಂಸ್ಕೃತಿಕ ಹಾಗೂ ಕ್ಷೇಮಾಭಿವೃದ್ಧಿ ಸಂಘ(ರಿ) ಸದಸ್ಯರು.
9. ಶಾರದಾಂಭನಗರ ಮಹಿಳಾ ಸ್ತ್ರೀ ಶಕ್ತಿ ಸಂಘ- ಸದಸ್ಯರು
10. ಶ್ರೀಮತಿ ಶಾಂತ – ಸದಸ್ಯರು
11. ಶ್ರೀ ಯೋಗಾನಂದ .ಸಿ.ಎಸ್ – ಸದಸ್ಯರು
12. ಶ್ರೀ ಕೆ.ಟಿ. ವೆಂಕಟೇಶ್ – ಸದಸ್ಯರು
13. ಶ್ರೀ ಗುಂಡಣ್ಣ.ಎಸ್-ಸದಸ್ಯರು

ವಿಷಯ: **1. 2017-18ನೇ ಸಾಲಿನ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಮತ್ತು 2018-19ನೇ ಸಾಲಿನ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸುವ ಕುರಿತು.**

**4. ಕಸ ವಿಲೇವಾರಿ ಮತ್ತು ಕೊರತೆಯಿರುವ ಪೌರಕಾರ್ಮಿಕರ ಬಗ್ಗೆ**

**5. ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಬೆಸ್ಕಾಂ ಇಲಾಖೆಯವರು ಅನಧಿಕೃತವಾಗಿ ರಸ್ತೆ ಅಗೆಯುತ್ತಿರುವ ಬಗ್ಗೆ ಮತ್ತು ಇನ್ನಿತರ ವಿಷಯಗಳ ಬಗ್ಗೆ.**

ಬಿ.ಬಿ.ಎಂ.ಪಿಯ ಕಂದಾಯ ಇಲಾಖೆಯ, ಬೆಂ.ನೀ.ಸ & ಒಳಚರಂಡಿ ಮಂಡಳಿ, ಬೆಸ್ಕಾಂ, ಆರೋಗ್ಯ ಇಲಾಖೆ ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 164 ರ ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಶ್ಯಾಮಲಾ ಕುಮಾರ್, ಪಾಲಿಕೆ ಸದಸ್ಯರು – ಅಧ್ಯಕ್ಷರು ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು

1. ಈಗಾಗಲೇ ಅನುಮೋದನೆಗೊಂಡಿರುವ ರಸ್ತೆ ಡಾಂಬರೀಕರಣ ಮತ್ತು ರಸ್ತೆ ಅಭಿವೃದ್ಧಿ ಕೆಲಸಗಳನ್ನು ಶೀಘ್ರವಾಗಿ ಪ್ರಾರಂಭಿಸಿ ಮಳೆಗಾಲಕ್ಕೆ ಮುಂಚಿತವಾಗಿ ಪೂರ್ಣಗೊಳಿಸುವಂತೆ ಹಾಗೂ ಹೊಸದಾಗಿ ಅನುಮೋದನೆಗಾಗಿ ಸಲ್ಲಿಸಿರುವ ಕಡತಗಳನ್ನು ಆದ್ಯತೆ ಮೇರೆಗೆ ಅನುಮೋದನೆ ಕೋರಿ ಮಂಡಿಸಲು ಸೂಚಿಸಲಾಗಿರುತ್ತದೆ.
2. ವಿನಾಯಕನಗರ 1ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆ ಮತ್ತು ಬಡಾವಣೆಯ ಇತರೆ ಸಮಸ್ಯೆ ಇರುವ ರಸ್ತೆಗಳಲ್ಲಿ ಒಳಚರಂಡಿ ಮತ್ತು ನೀರಿನ ಪೈಪುಗಳನ್ನು ಬದಲಾಯಿಸಲು ಕಾರ್ಯಪಾಲಕ ಅಭಿಯಂತರರು, ನೀ.ಸ. & ಒ.ಚ. ಮಂಡಳಿ ರವರಿಗೆ ಪತ್ರ ಬರೆಯಲು ಸೂಚಿಸಲಾಯಿತು.

3. ಬಿ.ಎಸ್.ಕೆ 1ನೇ ಹಂತ, 2ನೇ ಬ್ಲಾಕ್‌ನಲ್ಲಿರುವ ಹಾದು ಹೋಗಿರುವ 9ನೇ ಮುಖ್ಯರಸ್ತೆಯ ಚರಂಡಿಯು 7ನೇ ಅಡ್ಡರಸ್ತೆಯಿಂದ ಶಂಕರ್‌ನಾಗ್ ವೃತ್ತದವರೆಗೆ ಶಿಥಿಲಗೊಂಡಿರುತ್ತದೆ. ಅದನ್ನು ಕಾಂಕ್ರೀಟ್ ಚರಂಡಿಯಾಗಿ ಅಭಿವೃದ್ಧಿ ಪಡಿಸಲು ಅಂದಾಜು ಪಟ್ಟಿ ತಯಾರಿಸಿ ಅನುದಾನ ಕೋರಲು ಸೂಚಿಸಲಾಯಿತು.

4. 2018–19ನೇ ಸಾಲಿಗೆ ವಾರ್ಡ್ ವ್ಯಾಪ್ತಿಯಲ್ಲು ಎಲ್ಲಾ ದಾಖಲೆಗಳನ್ನು ಹೊಂದಿರುವ ಕ್ರಯಪತ್ರ ಹಾಗೂ ಖಾತಾ ನೋಂದಣಿ ಹೊಂದಿರುವ ಒಂಟಿ ಮನೆಯ 11 ಫಲಾನುಭವಿಗಳನ್ನು ಗುರಿತಿಸಿದ್ದು, ಅವುಗಳನ್ನು ಪರಿಶಿಲಿಸಲು ಕಂದಾಯ ಇಲಾಖೆಗೆ ಕಳುಹಿಸಿಕೊಡಲು ಸೂಚಿಸಲಾಗಿರುತ್ತದೆ.

5. 50 ಅಡಿ ರಸ್ತೆಯಿಂದ ವಿದ್ಯಾಪೀಠ ಚೆನ್ನಮ್ಮನ ಕರೆ ಮುಖ್ಯರಸ್ತೆಯು ರಿಂಗ್ ರಸ್ತೆ (ಕಾಮಾಕ್ಯ) ವರೆಗೆ ತುಂಬಾ ಹಾಳಾಗಿದ್ದು, ಹೊಸದಾಗಿ ಡಾಂಬರೀಕರಣ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಬೃಹತ್ ರಸ್ತೆಗಳು (ದಕ್ಷಿಣ) ರವರು ಕೈಗೊಳ್ಳಲು ಕೋರಲಾಗಿರುತ್ತದೆ.

6. ಕಲ್ಯಾಣ ಇಲಾಖೆ ವತಿಯಿಂದ ಬಡವರಿಗೆ ಹೊಲಿಗೆ ಯಂತ್ರ, ಸೈಕಲ್ ವಿತರಣೆ, ಆರೋಗ್ಯ ತಪಾಸಣೆ ಮತ್ತು ಉದ್ಯಾನವನಗಳ ನಿರ್ವಹಣೆಯಾಗಿರುವ ಬಗ್ಗೆ ಸದಸ್ಯರು ಎಲ್ಲರೂ ಸಂತಸ ವ್ಯಕ್ತ ಪಡಿಸಿದ್ದು, ಮುಂದಿನ ದಿನಗಳಲ್ಲಿ ಇದೇ ರೀತಿ ಒಗ್ಗಟ್ಟಿನಿಂದ ಕೆಲಸ ಕಾರ್ಯಗಳನ್ನು ಸಾರ್ವಜನಿಕರಿಗೆ ತಲುಪುವಂತೆ ಬದ್ಧರಾಗಿರುತ್ತೇವೆ ಎಂದು ಸಭೆಯಲ್ಲಿ ಒಮ್ಮತದಿಂದ ತಿಳಿಸಿರುತ್ತಾರೆ.

**ನಿರ್ಣಯ:** ಮೇಲ್ಕಂಡ ಎಲ್ಲಾ ಮಾಹಿತಿಯನ್ನು ಸರ್ವ ಸದಸ್ಯರು ಅಧ್ಯಕ್ಷರ ಮತ್ತು ಕಾರ್ಯದರ್ಶಿಯವರ ಸಮ್ಮುಖದಲ್ಲಿ ಚರ್ಚಿಸಿ, ತೀರ್ಮಾನ ಕೈಗೊಂಡು ಸಹಿ ಮಾಡಿರುತ್ತಾರೆ.

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ಸಂಖ್ಯೆ: 164, ವಿದ್ಯಾಪೀಠ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ